# ಮೊಟ್ಟೆಯಿಂದ ಮಾನವ!

ಸುರಕ್ಷತೆಯ ಉದ್ದೇಶದಿಂದ ಬ್ಯಾಂಕ್ ಖಾತೆಗಳಲ್ಲಿ ಹಣ ಇರಿಸುವಂತೆ, ನಾಳೆಗಳ ಸುರಕ್ಷತೆಗಾಗಿ ಅಂಡಾಣುಗಳನ್ನು ಸಂಗ್ರಹಿಸಿ ಜತನಗೊಳಿಸುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಅಂಡಾಣು ಸಂಗ್ರಹಿಸಿ ಸುರಕ್ಷಿತವಾಗಿಡುವ ‘ಅಂಡಾಣು ಬ್ಯಾಂಕ್’ಗಳ ಸಂಖ್ಯೆಯೂ ಹೆಚ್ಚುತ್ತಿದೆ. ವೃತ್ತಿ ಹಾಗೂ ವೈಯಕ್ತಿಕ ಕಾರಣಗಳಿಂದಾಗಿ ಮಗುವನ್ನು ಮುಂದೂಡುವ ಹೆಣ್ಣುಮಕ್ಕಳಿಗೆ ‘ಎಗ್ ಫ್ರೀಜಿಂಗ್’ ಎಂದು ಕರೆಸಿಕೊಳ್ಳುವ ಅಂಡಾಣು ಸಂಗ್ರಹ ತಂತ್ರಜ್ಞಾನ ವರವೇ ಸರಿ. ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ತರುಣ ತರುಣಿಯರು ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾಲಘಟ್ಟದಲ್ಲಿ ಬೆಳ್ಳಿಕಿರಣದಂತೆ ಕಾಣಿಸುತ್ತಿರುವ ‘ಐವಿಎಫ್’ ಚಿಕಿತ್ಸೆಯೂ ‘ಎಗ್ ಫ್ರೀಜಿಂಗ್’ಗೆ ಪೂರಕವಾಗಿದೆ. ಹೆಣ್ಣುಮಕ್ಕಳ ಪಾಲಿಗೆ ಮಗುವಿನ ಆಯ್ಕೆಯ ಸಮಯದ ಸ್ವಾತಂತ್ರ್ಯ ಒದಗಿಸಿದಂತೆ ಕಾಣಿಸುವ ‘ಎಗ್ ಫ್ರೀಜಿಂಗ್’ ತಂತ್ರಜ್ಞಾನವನ್ನು ಕೆಲವು ತೊಡಕುಗಳೂ ಕಾಡುತ್ತಿವೆ. ಮುಖ್ಯವಾಗಿ, ಇದು ದುಬಾರಿ ಪ್ರಕ್ರಿಯೆ; ಜನಸಾಮಾನ್ಯರಿಗೆ ಸುಲಭವಾಗಿ ಎಟುಕದಂತಹದ್ದು. ‘ಎಗ್ ಫ್ರೀಜಿಂಗ್’ ಅನಿವಾರ್ಯ ಚಿಕಿತ್ಸೆಯಾಗುವ ಬದಲು, ಉಳ್ಳವರ ಪಾಲಿಗೆ ಜೀವನಶೈಲಿಯ ಭಾಗವಾಗಿ ಒದಗಿಬರುತ್ತಿದೆ. ಫಲವಂತಿಕೆಯ ಆಸ್ಪತ್ರೆಗಳ ಉಬ್ಬರ ಹಾಗೂ ಅಂಡಾಣುಗಳ ಸಾಗಣೆಯ ಅಂತರರಾಷ್ಟ್ರೀಯ ದಂಧೆ, ಮನುಷ್ಯನ ಹುಟ್ಟು ಸಂಕೀರ್ಣವಾಗಿರುವುದನ್ನು ಸೂಚಿಸುವಂತಿದೆ.

■ ಚೈತ್ರಿಕಾ ನಾಯ್ಕ ಹರ್ಗಿ